ಸರ್ಕಾರಿ ಪ.ಪೂ.ಕಾಲೇಜು, ಬೆಳಗೊಳ	51.22	–
ಸರ್ಕಾರಿ ಪ.ಪೂ.ಕಾಲೇಜು, ಎಂ. ಶೆಟ್ಟಿಹಳ್ಳಿ	–	–
ಸರ್ಕಾರಿ ಪ.ಪೂ.ಕಾಲೇಜು, ನಗೂನಹಳ್ಳಿ	–	12.42
ಸರ್ಕಾರಿ ಪ.ಪೂ.ಕಾಲೇಜು, ಕೊಡಿಯಾಲ	–	44.34

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಶಾಲಾ ಶಿಕ್ಷಕರ ಕೊರತೆಯ ಬಗ್ಗೆ

115 (81): ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕಿನಾದ್ಯಂತ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಇವೆ. ಇದರಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಿಗೆ ಎಷ್ಟು ಸ್ವಂತ ಕಟ್ಟಡಗಳು ಇವೆ; ಎಷ್ಟು ಶಾಲೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ;

ಇ) ಯಾವ ಯಾವ ಶಿಕ್ಷಕರ ಕೊರತೆ ಇದೆ ವಿವರವಾರು ಒದಗಿಸುವುದು;

ಈ) ಇಲ್ಲಿನ ಪ್ರಾಥಮಿಕ ಹಾಗೂ ಪ್ರೌಢ ಸಾಲೆಗೆ ಸ್ವಂತ ಕಟ್ಟಡ ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕೈಗೊಳ್ಳುವ ಕ್ರಮವೇನು?

ಉ) ಇಲ್ಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸುತ್ತಲೂ ಕಾಂಪೌಂಡ್ ಇಲ್ಲದೇ ವಿದ್ಯಾರ್ಥಿಗಳಿಗೆ ಆಟದ ಮೈದಾನವಿಲ್ಲದೇ ತೊಂದರೆಯಾಗುತ್ತಿರುವುದು ನಿಜವಲ್ಲವೇ; ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು? ಇದಕ್ಕಾಗಿ ಮಾಡಲಿರುವ ವೆಚ್ಚ ಎಷ್ಟು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ)

ಕ್ರ.ಸಂ	ತಾಲ್ಲೂಕು	ಪ್ರಾಥಮಿಕ ಶಾಲೆಗಳ ಸಂಖ್ಯೆ	ಪ್ರೌಢಶಾಲೆಗಳ ಸಂಖ್ಯೆ	ಒಟ್ಟು ಮಕ್ಕಳ ಸಂಖ್ಯೆ	
				ಗಂಡು	ಹೆಣ್ಣು
1.	ಬಾಗೇಪಲ್ಲಿ	305	20	13533	12944
2.	ಗುಡಿಬಂಡೆ	107	11	4222	4181

ಆ)

ಕ್ರ.ಸಂ.	ತಾಲ್ಲೂಕು	ಪ್ರಾಥಮಿಕ		ಪ್ರೌಢ	
		ಸ್ವಂತ ಕಟ್ಟಡ	ಖಾಸಗಿ ಕಟ್ಟಡ	ಸ್ವಂತ ಕಟ್ಟಡ	ಖಾಸಗಿ ಕಟ್ಟಡ
1.	ಬಾಗೇಪಲ್ಲಿ	305	20	13533	12944
2.	ಗುಡಿಬಂಡೆ	107	11	4222	4181

ಇ) ಬಾಗೇಪಲ್ಲಿ ತಾಲ್ಲೂಕು

ಪ್ರಾಥಮಿಕ ಶಿಕ್ಷಕರು:65	ಪ್ರೌಢ: ಸಿಬಿಝಡ್	06
	ಕಲಾ	01
	ಆಂಗ್ಲ	05
	ಕನ್ನಡ	01
	ದೈ.ಶಿ.	02
ಗುಡಿಬಂಡೆ ತಾಲ್ಲೂಕು		
ಪ್ರಾಥಮಿಕ:29	ಪ್ರೌಢ: ಸಿಬಿಝಡ್	02
	ಕಲಾ	02
	ಆಂಗ್ಲ	03
	ಕನ್ನಡ	02
	ಇತರೆ	05

ಈ) ಬಂದಿರುತ್ತದೆ. ಬಾಗೇಪಲ್ಲಿ ಮತ್ತು ಗುಡಿಬಂಡೆ ಈ ಎರಡು ತಾಲ್ಲೂಕುಗಳಿಗೆ 2010–11ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಯಡಿಯಲ್ಲಿ 32 ಶಾಲಾ ಕೊಠಡಿಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಉ) ಹೌದು. ಈಗಾಗಲೇ 2010–11ನೇ ಸಾಲಿನಲ್ಲಿ ಎಸ್‌ಡಿಪಿ ಯೋಜನೆಯಡಿಯಲ್ಲಿ ಕೆಳಕಂಡ ಶಾಲೆಗಳಿಗೆ ಕಾಂಪೌಂಡ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಅ) ಸರ್ಕಾರಿ ಬಾಲಕರ ಪ್ರೌಢಶಾಲೆ ಬಾಗೇಪಲ್ಲಿ ಪಟ್ಟಣ.

ಆ) ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಬಾಗೇಪಲ್ಲಿ ಪಟ್ಟಣ.

ಚಿಕ್ಕಬಳ್ಳಾಪುರ ಜಿಲ್ಲೆಯ ನೆಹರು ಹಾಗೂ ಸರ್ ಎಂ. ವಿ. ರವರ ಗ್ರಂಥಾಲಯದ ಬಗ್ಗೆ

116 (82): ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ ಕ್ಷೇತ್ರ): ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೆಹರು ಹಾಗೂ ಸರ್. ಎಂ. ವಿಶ್ವೇಶ್ವರಯ್ಯ ಗ್ರಂಥಾಲಯಗಳು ಇದ್ದು, ಇದರ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ. ಇದಕ್ಕೆ ನೀಡಿರುವ ಅನುದಾನ ಎಷ್ಟು?

ಆ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮ ಪಂಚಾಯತಿ ಗ್ರಂಥಾಲಯಗಳು ಇವೆ; ಇವುಗಳಿಗೆ ಸ್ವಂತ ಕಟ್ಟಡ ಸಿಬ್ಬಂದಿ ಇಲ್ಲದೇ ವಾಚಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು; ಇದಕ್ಕೆ ಸರ್ಕಾರವು ಮಾಡಲಿರುವ ಖರ್ಚು ಎಷ್ಟು?

ಶ್ರೀ ರೇವೂ ನಾಯಕ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):

ಅ) ಸದರಿ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ರೂ. 160.00 ಲಕ್ಷಗಳ ಅನುದಾನ ಒದಗಿಸಲು